


ಶ್ರೀಕೃಷ್ಣದೇವಸ್ಥಾನದ ಮುಂದಿನ ಕೊಳದಲ್ಲಿ ಕೈಕಾಲುಗಳನ್ನು ತೊಳೆದುಕೊಳ್ಳುತ್ತಿರುವಾಗ, ಪಸೆಯಾರಿದ ಬಾಯಿಗೂ ಒಂದಿಷ್ಟು ನೀರುಹಾಕಿ ಮುಕ್ಕಳಿಸಿ ಉಗುಳುವ ಬಯಕೆಯುಂಟಾದರೂ ಸಾವಿರಾರು ಮಂದಿ ಉಪಯೋಗಿಸುವ ನೀರನ್ನು ಎಂಜಲು ಮಾಡುವುದು ಸರಿಯಲ್ಲ, ಅಥವಾ ಸಾವಿರಾರು ಮಂದಿ ಕಾಲು ತೊಳೆದ ನೀರನ್ನು ಬಾಯಿಗೆ ಹಾಕಿಕೊಳ್ಳುವುದು ಹೇಸಿಗೆ ಎಂಬ ದ್ವೈಧೀಭಾವ. ನಯವಾದ ಪಾವಟಿಗೆಗಳ ಮೇಲೆ ಕಾಲುಗಳು ಜಾರದಂತೆ ಜಾಗ್ರತೆಯಾಗಿ ಮೇಲೇರುತ್ತಿರುವಾಗ ಪಾದಗಳ ಅಡಿಗೆ ಕುಳಿರು ಕುಳಿರು ನವಿರು ನವಿರು ಸ್ಪರ್ಶದ ಅನುಭವ. ದೇವಾಲಯದ ಹೊರಗಿರಿಸಿದ ಚಪ್ಪಲಿಗಳ ನೆನಪಾಗಿ, ಅಪ್ಪನಿಂದ ಬೇಡಿ ಪಡೆದ ಹಣದಲ್ಲಿ ನಿನ್ನೆ ತಾನೇ ಕೊಂಡುಕೊಂಡ ಹೊಸ ಜೊತೆ ಮರಳಿಹೋಗುವಷ್ಟರಲ್ಲಿ ಉಳಿದಿರುವುದೋ ಇಲ್ಲವೋ, ಯಾರಾದರೂ ಹಾರಿಸಿಕೊಂಡು ಹೋದರೆ ಪ್ಯಾಂಟು ಹಾಕಿಕೊಂಡು ಬರಿಗಾಲಿನಲ್ಲಿ ಈ ಪೇಟೆಯ ನಡುವೆ ನಡೆದುಕೊಂಡು ಹೋಗಿ ಮನೆಮುಟ್ಟುವ ಬಗೆ ಹೇಗೆ?– ಎಂದು ಚಿಂತಿಸುತ್ತಾ ಒಂದು ಬಗೆಯ ಕಸಿವಿಸಿಯಿಂದ ದೇವಾಲಯದ ಒಳಅಂಗಣವನ್ನು ಪ್ರವೇಶಿಸಿದ. ವೆಂಕಟರಮಣ, ಪಡುಬದಿಯ ಗೋಪುರದಲ್ಲಿ ನಡೆಯುತ್ತಿರುವ ಗೀತಾವಾಚನದ ಘೋಷವು ಅವನ ಕಿವಿಯೊಳಗೆ ತುಂಬಿ, ಅದರ ಅರ್ಥವಾಗದ ಶಬ್ದರಾಶಿ ಅವನ ಮಿದುಳನ್ನು ಕೆದಕಿ, ಅವನ ಇಂಗ್ಲಿಷ್ ಪಾಂಡಿತ್ಯ ಮತ್ತು ಸಂಸ್ಕೃತದ ಶೂನ್ಯಜ್ಞಾನವನ್ನು ಕೆಣಕಿ,